ಅ) ಇದರಲ್ಲಿ ಏಕೋಪಾಧ್ಯಾಯ ಶಾಲೆಗಳಿಗೆ ಹೆಚ್ಚಿನ ಕೊಠಡಿಗಳನ್ನು ಕಟ್ಟುವ ಯೋಜನೆ ರೀತ್ಯ ಎಷ್ಟು ಕಟ್ಟಡಗಳು ಮುಗಿದಿವೆ?

ಇ) ಶಾಲೆಗಳಿಗೆ ಪೀಠೋಪಕರಣಗಳನ್ನು ಒದಗಿಸಿದ್ದಲ್ಲಿ ವಿವರಣನ್ನು ನೀಡುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ)

	ರೂ. ಲಕ್ಷಗಳಲ್ಲಿ
1)ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ	1694.81
2)ಪ್ರಾಥಮಿಕ ಶಾಲಾ ಶಿಕ್ಷಕರ ಸಂಬಳಕ್ಕಾಗಿ	650.53
3)ಕಲಿಕಾ ಬೋಧನಾ ಸಾಮಗ್ರಿಗಳ ಪೂರೈಕೆಗಾಗಿ	908.31
ಒಟ್ಟು ರೂ.	3253.65

ಆ) 3268

ಇ)

ಹಂತ	ಸಾಮಗ್ರಿಗಳನ್ನು ಪೂರೈಸಬೇಕಾದ ಶಾಲೆಗಳ ಸಂಖ್ಯೆ	ಸಾಮಗ್ರಿಗಳನ್ನು ಪೂರೈಸಿದ ಶಾಲೆಗಳ ಸಂಖ್ಯೆ
1.	2473	2473
2.	7598	ಸಾಮಗ್ರಿಗಳ ಪೂರೈಕೆ ಪ್ರಗತಿಯಲ್ಲಿದೆ.
3.	4009	

ಕೆ.ಎಂ.ಸಿ. ಆಸ್ಪತ್ರೆಯಲ್ಲಿರುವ ವೈದ್ಯರು ಹಾಗೂ ಸರ್ಜನ್‌ರುಗಳ ಹುದ್ದೆಗಳನ್ನು ತುಂಬುವುದು.

1671 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳಿಯಲ್ಲಿನ ಕೆ.ಎಂ.ಸಿ ಆಸ್ಪತ್ರೆಯಲ್ಲಿರುವ ವೈದ್ಯರು ಹಾಗೂ ಸರ್ಜನ್‌ರುಗಳ ಹುದ್ದೆಗಳೆಷ್ಟು?

ಆ) ಇವುಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ಸರ್ಜನ್‌ರುಗಳ ಹುದ್ದೆಗಳೆಷ್ಟು?

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)

ಅ) ವೈದ್ಯರು - 35
ಸರ್ಜನ್‌ರು - 3
ಒಟ್ಟು - 38

ಆ) ಯಾವುದೂ ಖಾಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ವೈದ್ಯಕೀಯ ಶಿಕ್ಷಕರು ಹಾಗೂ ವೈದ್ಯಾಧಿಕಾರಿಗಳು ಖಾಸಗೀ ನರ್ಸಿಂಗ್ ಹೋಂಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿರುವುದು.

1395 - ಶ್ರೀ ಆರ್. ಬಿ. ಚೌದರಿ (ಸಿಂಧಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ವೈದ್ಯಕೀಯ ಶಿಕ್ಷಕರು ಹಾಗೂ ವೈದ್ಯಾಧಿಕಾರಿಗಳು, ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಪ್ರಾಕ್ಟೀಸ್ ಮಾಡಲು ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕೆ?

ಆ) ಖಾಸಗಿಯಾಗಿ ಸ್ವಂತ ಕ್ಲಿನಿಕ್‌ಗಳನ್ನು ನಡೆಸಲು ಸರ್ಕಾರವು ಒಪ್ಪಿಗೆ ಇತ್ತಿದೆಯೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ.

ಬಿಜಾಪೂರಿನ ಸರ್ವೆ ನಂ. 838 ಮಹಾಲಿಬಾಗಾಯತ್‌ವು ವಕ್ಫ್ ಆಸ್ತಿಯಾಗಿರುವುದು.

1785 - ಶ್ರೀ ಸಾದತ್ ಅಲಿ ಖಾನ್, (ಚನ್ನಪಟ್ಟಣ) : ಮಾನ್ಯ ಸಾರಿಗೆ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರಿನ ಸರ್ವೆ ನಂ. 838 ಮಹಾಲಿಬಾಗಾಯತ್‌ವು ವಕ್ಫ್ ಆಸ್ತಿಯಾಗಿದ್ದು ನಿಜವಲ್ಲವೇ.

ಆ) ಸರ್ವೆನಂ. 838 ರಲ್ಲಿ ಸೀತಾಫಲವನ್ನು ಬೆಳೆಯುತ್ತಿರುವುದು ನಿಜವಿಲ್ಲವೇ?

ಇ) ಸೀತಾಫಲದ ಬೆಳೆಯನ್ನು ಯಾವ ರೀತಿಯಲ್ಲಿ ಹಾಗೂ ಯಾರಿಗೆ ವಿಲೆ ಮಾಡಲು ಅಧಿಕಾರವೀಯಲಾಗಿದೆ.

ಈ) ಸ.ನಂ. 838ರಲ್ಲಿರುವ ಸೀತಾಫಲ ಬೆಳೆಯಿಂದ ಒಂದು ವರ್ಷದ ಆದಾಯವೆಷ್ಟು ಹಾಗೂ ಸದರಿ ಆದಾಯ ಕಳೆದ 8 ವರ್ಷಗಳಿಂದ ಎಲ್ಲಿ ಕೂಡಿಡಲಾಗಿದೆ.

ಉ) ಹೀಗೆ ಬಂದ ಆದಾಯವನ್ನು ಸ.ನಂ. 838 ರಲ್ಲಿರುವ ಮುಸಲ್ಮಾನ್ ಸ್ಮಶಾನ ಹಾಗೂ ಮಸೀದಿಯ ಸುಧಾರಣೆಗೆ ಉಪಯೋಗಿಸಲಾಗುತ್ತಿದೆಯೆ?

ಊ) ಇಲ್ಲದಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತದೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಹಾಗೂ ವಕ್ಫ್ ಮಂತ್ರಿಗಳು) :

ಅ) ಹೌದು. ವಕ್ಫ್ ಆಸ್ತಿ ಆಗಿರುವುದು.

ಆ) ಹೌದು.

ಇ) ದರ್ಗಾ ಗ್ರಾಮದ ಗ್ರಾಮ ಪಂಚಾಯತಿಯು ಪ್ರತಿ ವರ್ಷ ಸೀತಾಫಲ ಬೆಳೆಯ ಹರಾಜು ಮಾಡುತ್ತಿದೆ.

ಈ) ಈ ಹರಾಜಿನಿಂದ ರೂ. 50,000-00 ವಾರ್ಷಿಕ ಆದಾಯ ಬರುತ್ತಿದ್ದು ಕಳೆದ 8 ವರ್ಷಗಳಿಂದ ದರ್ಗಾ ಗ್ರಾಮದ ಮಂಡಲ ಪಂಚಾಯಿತಿಯ ಹತ್ತಿರ ಈ ಹಣ ಇರುವುದು.

ಉ) ಇಲ್ಲ.

ಊ) ಮಾಹಿತಿ ಇಲ್ಲ.

ಮಹಲ್‌ಬಾಗಾಯ್ತು ವಕ್ಫ್ ಆಸ್ತಿಯ ವಿಸ್ತೀರ್ಣ

1784 - ಸಾದತ್ ಅಲಿ ಖಾನ್ ಎಂ.ಎಲ್.ಎ. (ಚನ್ನಪಟ್ಟಣ) : ಮಾನ್ಯ ಸಾರಿಗೆ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದ ಮಹಲ್ ಬಾಗಯ್ತನ ಸ.ನಂ.838ನ್ನು ರಾಜ್ಯಪತ್ರದಲ್ಲಿ ವಕ್ಫ್ ಆಸ್ತಿ ಎಂದು ಪ್ರಕಟಿಸಿರುವುದು. ನಿಜವೇ?

ಆ) ಹಾಗಿದ್ದಲ್ಲಿ, ಸದರಿ 838 ಸರ್ವೆ ನಂಬರಿನಡಿಯಲ್ಲಿ ಬರುವ ವಕ್ಫ್ ಭೂಮಿಯ ಕ್ಷೇತ್ರವೆಷ್ಟು?

ಇ) ಸರ್ವೆ ನಂಬರ್ 838ರಲ್ಲಿ ಬರುವ ಮಸೀದಿಗಳ ಸಂಖ್ಯೆ ಎಷ್ಟು? (ಮಸೀದಿಗಳ ಹೆಸರುಗಳನ್ನು ನಮೂದಿಸಿ).

ಈ) ಸರ್ವೆ ನಂ. 838 ರಲ್ಲಿಯ ವಕ್ಫ್ ಆಸ್ತಿಗಳನ್ನು ಸ್ಥಳೀಯ ಜನರು ಅತಿಕ್ರಮಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?